ಪಿ.ಡಬ್ಲ್ಯು:1

**ದಿನಾಂಕ:25.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು: 1,2,3 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ.ಕೆ.ಎಸ್.ಆರ್. ವಕೀಲರಿಂದ:**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಾವಾ ಆಸ್ತಿ ನನಗೆ ಗೊತ್ತಿರುತ್ತದೆ. ಸರ್ವೇನಂ.91 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ಗೊತ್ತಿಲ್ಲ, ಆದರೆ

ಸರ್ವೇನಂ.91/3 ರಲ್ಲಿ ನನಗೆ ಒಂದು ಎಕರೆ 2 ಗುಂಟೆ ಜಮೀನು ಇರುತ್ತದೆ. ಸರ್ವೇನಂ.91 ರ ಒಟ್ಟಾರೆ ಜಮೀನಿನಲ್ಲಿ ಯಾರು ಯಾರು ಆಸ್ತಿ ಹೊಂದಿದ್ದಾರೆ ಮತ್ತು ಎಷ್ಟು ಪಹಣಿಗಳಿವೆ ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ದಾಖಲಿಸುವ ಮುನ್ನ ದಾವ ಆಸ್ತಿಯನ್ನು ಅಳತೆ ಮಾಡಿರುಸಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳ ಆಸ್ತಿಯ ಸರ್ವೇನಂಬರ್ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯ ಸರ್ವೇ ಸ್ಕೆಚ್ಚನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ಪ್ರತಿವಾದಿಗಳು ನಮ್ಮ ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಅವರ ವಿರುದ್ಧ ಈ ದಾವೆ ದಾಖಲು ಮಾಡಿರುತ್ತೇನೆ.ನಿಮಗೂ ಪ್ರತಿವಾದಿಗಳಿಗೂ ದಾವಾ ಆಸ್ತಿಯ ವಿಚಾರಕ್ಕೆ ಗಲಾಟೆಯಾಗಿ ಅಜ್ಜಂಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಅಂದರೆ ಸಾಕ್ಷಿಯು ಪ್ರತಿವಾದಿಗಳು ನಮಗೆ ತೊಂದರೆ ಕೊಟ್ಟಿದ್ದರಿಂದ ನಾವು ದೂರು ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳೂ ಸಹ ನಿಮ್ಮ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ ಅಂದರೆ ಸರಿ.

ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃರಸ್ತೆ, ಪಶ್ಚಿಮಕ್ಕೆಃ ಕಟ್ಟೆ ರಸ್ತೆ ಉತ್ತರಕ್ಕೆಃಹಾಲಪ್ಪ, ದಕ್ಷಿಣಕ್ಕೆಃಸಿ.ಜಿ.ಹಾಲಪ್ಪ ಮತ್ತು ಪರಮೇಶ್ವರಪ್ಪ ಇರುತ್ತದೆ. ಪ್ರತಿವಾದಿಗಳ ಆಸ್ತಿಯ ಸರ್ವೇನಂಬರ್ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿನ ಚಕ್ಕುಬಂದಿಯಲ್ಲಿ ಪ್ರತಿವಾದಿಗಳ ಆಸ್ತಿ ಇರುತ್ತದೆ. ನನ್ನ ತಂದೆ ಹೆಸರು ವೀರಭದ್ರಪ್ಪ ಅಂದರೆ ಸರಿ. ದಿಃ25.03.1968 ರಲ್ಲಿ ನನ್ನ ತಂದೆ ವೀರಭದ್ರಪ್ಪ ರವರು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆಯು ಅವರ ಸಹಿಯನ್ನು ಬರೆಯುತ್ತಿರಲಿಲ್ಲ, ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು. 1968 ನೇ ಇಸವಿಯಲ್ಲಿ ನಿಮ್ಮ ತಂದೆ ವೀರಭದ್ರಪ್ಪ ರವರು 1 ನೇ ಪ್ರತಿವಾದಿ ಪಾರ್ವತಮ್ಮ ರವರಿಗೆ ಏನು ಬರೆದುಕೊಟ್ಟರು ಎಂದು ಗೊತ್ತಿದೆಯಾ ಅಂದರೆ, ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 1968 ನೇ ಇಸವಿಯಲ್ಲಿ ನಿಮ್ಮ ತಂದೆ ವೀರಭದ್ರಪ್ಪ ರವರು 1 ನೇ ಪ್ರತಿವಾದಿ ಪಾರ್ವತಮ್ಮ ರವರಿಗೆ ಯಾವ ಆಸ್ತಿಗೆ ಸಂಬಂಧಿಸಿದಂತೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಅಂದರೆ, ಸಾಕ್ಷಿಯು ಸರ್ವೇನಂ.91/5 ರ ಆಸ್ತಿಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಪಿ.ಡಬ್ಲ್ಯೂ:1

ತುಂಬಾ ವರ್ಷಗಳಿಂದ ನಿಮಗೂ ಪ್ರತಿವಾದಿಗಳಿಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ದ್ವೇಷವಿದೆ ಅಂದರೆ ಸಾಕ್ಷಿಯು 2017 ರಿಂದ ದ್ವೇಷ ಉಂಟಾಗಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಯಾವ ರೀತಿಯಲ್ಲಿದ್ದೆ? ಅಂದರೆ ಸಾಕ್ಷಿಯು ಪೂರ್ವ-ಪಶ್ಚಿಮಕ್ಕೆ ಉದ್ದವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಜಮೀನಿನ ಉತ್ತರ ದಿಕ್ಕಿಗೆ ಯಾರ ಜಮೀನು ಇದೆ ಅಂದರೆ ಸಾಕ್ಷಿಯು ಹಾಲಪ್ಪ ಮತ್ತು ಗಂಗಪ್ಪ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ನಾನು ವಕೀಲರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯ ಚಕ್ಕುಬಂದಿಯಲ್ಲಿ ನಮೂದಿಸಿರುವಂತೆ ಚಕ್ಕುಬಂದಿ ಸರಿ ಇದೆಯಾ? ಎಂದು ಚಕ್ಕುಬಂದಿಗಳನ್ನು ಕೇಳಲಾಗಿ, ಸಾಕ್ಷಿಯು ಪೂರ್ವ-ಪಶ್ಚಿಮ ಮತ್ತು ದಕ್ಷಿಣಕ್ಕೆ ಸರಿಯಾಗಿ ನಮೂದಿಸಲಾಗಿದೆ, ಆದರೆ ಉತ್ತರಕ್ಕೆ ಪ್ರತಿವಾದಿಗಳ ಜಮೀನು ಎಂದು ತಪ್ಪು ನಮೂದು ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಮೂದಿಸಿರುವ ಆಸ್ತಿಯ ಚಕ್ಕುಬಂದಿಯೊಳಗೆ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂದಿಯೊಳಗೆ ನಾವು ಸ್ವಾಧೀನ ಇರುವುದರ ಬಗ್ಗೆ ಚಕ್ಕುಬಂದಿ ದೃಢೀಕರಣ ಪತ್ರವನ್ನು ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿಲ್ಲ. ದಾವಾ ಆಸ್ತಿಯಲ್ಲಿ ಏನಿದೆ ಎಂದು ಕೇಳಲಾಗಿ ಸಾಕ್ಷಿಯು 18 ತೆಂಗಿನ ಮರ, ಒಂದು ಹಲಸಿನ ಮರ, ಒಂದು ಅಮ್ಟೆ ಮರ ಹಾಗೂ ಉಳಿದದ್ದು ಖಾಲಿ ಜಮೀನು ಇರುತ್ತದೆ. ಸದರಿ ತೆಂಗಿನ ಮರಗಳನ್ನು ನನ್ನ ತಂದೆಯು ನೆಟ್ಟಿದ್ದರು. ಸದರಿ ತೆಂಗಿನ ಮರಗಳಿಗೆ ಸುಮಾರು 40 ವರ್ಷಗಳು ವಯಸ್ಸಾಗಿದೆ.

ದಾವಾ ಆಸ್ತಿಯು ನನ್ನ ತಂದೆಗೆ ಹೇಗೆ ಬಂದಿದೆ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಜಮೀನಿನಲ್ಲಿ ಅವರು ಸ್ವಾಧೀನದಲ್ಲಿದ್ದಾರೆ ಅಂದರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿದ್ದೇನೆ, ಅವರ ಆಸ್ತಿಯಲ್ಲಿ ಅವರು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರ:ದ:ನ್ಯಾ:ದಂ.,ರವರು, ಕಡೂರು.